4. ಟೆಂಡರುಗಳ ಸಮೇತ ವಂದು ನೂರು ರೂಪಾಯಿಗಳನ್ನು ನಗದೀಯಾಗಲಿ ಕರೆನ್ಸೀ ನೋಟ್ ಮೂಲಕವಾಗಿಯಾಗಲಿ ಠೇವಣೀ ಹಾಜರ್ ಮಾಡಬೇಕು. ಠೇವಣೀ ಮೊಬಲಗು ಯಿಲ್ಲದೇ ಬರುವ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದಿಲ್ಲವು.

5. ಪ್ರತಿ ದರಖಾಸ್ತುದಾರನೂ ನಾಟೂ ಯೂ ಪೆಲಗು ಜಮಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಬಿದರುಗಳು ಜಮಾಯಿಸುವದಕ್ಕೆ ಶೇಕಡಾ ವೆಂದಕ್ಕೆ ದರ ನಮೂದಿಸಬೇಕು.

6. ಯಾವ ಟೆಂಡರನ್ನಾಗಲೀ ಕಾರಣವನ್ನು ತೋರಿಸದೇ ತಿರಸ್ಕರಿಸಲಿಕ್ಕೆ ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿ ಯಿರುತ್ತಾರೆ.

7. ಜಂಗಲಿಯಲ್ಲಿ ಫಾರೆಸ್ಟ್ ಇಲಾಖೇಯವರು ನಿರ್ಖಾ ಮಾಡಿದ ಮರವನ್ನು ಕಡದು ಹಂಚಿಕೆಯಾಗಿ ಕೆತ್ತಿ ಡಿಪೋಕ್ಕೆ ಸಾಗಿಸುವದಕ್ಕೆ ದರಖಾಸ್ತುದಾರನು ಬದ್ಧನಾಗಿ ಯಿರತಕ್ಕದ್ದು.

8. ಕಂಟ್ರಾಕ್ಟು ಮಂಜೂರಾದ ತಾರೀಖು ಲಾಗಾಯತು ವಂದು ವಾರದವಳಗಾಗಿ ನ್ಯಾಯವಾದ ಸ್ಟಾಂಪು ಕಾಗದದಮೇಲೆ ಕಂಟ್ರಾಕ್ಟು ಮುಚ್ಚಳಿಕೆ ಬರಕೊಡದೇ ತಪ್ಪಿದ ಪಕ್ಷದಲ್ಲಿ ಠೇವಣೀ ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತದೆ.

9. ಕಂಟ್ರಾಕ್ಟು ಮುಚ್ಚಳಿಕೆ ನಮೂನೇ ವ ಷರತ್ತುಗಳು ಮತ್ತು ಕಂಟ್ರಾಕ್ಟುದಾರಿಗೆ ಬೇಕಾದ ಇತರ ವಿಷಯಗಳನ್ನು ಫಾರೆಸ್ಟ್ ಅಸಿಸ್ಟೆಂಟ್ ಕ್ಯಸರ್‌ವೇರ್ಟ್ ಸಾಹೇಬರವರ ಆಫೀಸಿನಲ್ಲಿ ಹಾಜರಾಗಿ ತಿಳಿದುಕೊಳ್ಳತಕ್ಕದ್ದು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ರೆಜಿಸ್ಟ್ರೀ ಆಫೀಸಿನಲ್ಲಿ ಈ ಕೆಳಗೆ ವಿವರಿಸೋಣಾದ ರೆಜಿಸ್ಟ್ರಾದ 1 ತಂಸೂಕು 2 ಪ ರುಷಗಳಿಗೆ ಮೇಲ್ಪಟ್ಟು ಕಾಲದಿಂದ ಹಾಜರ್ಮಾಡಿದವನು ವಾಪಸ್ ಕೇಳದೇ ಇರುವ ಕಾರಣ ನಿಂತಿರುತ್ತೆ ಡಿಪೋ ತಂಸೂಕನ್ನು ಹಾಜರ್ಮಾಡಿದವನಾಗಲಿ ಅಥವಾ ವಾಪಸ್ ಪಡೆಯಲು ಅಧಿಕಾರ ಹೊಂದಿದವರಾಗಲಿ ಈ ಲಾಗಾಯತು 1 ತಿಂಗಳೊಳಗೆ ಚಿಕ್ಕಬಳ್ಳಾಪುರ ಸಬ್ ರೆಜಿಸ್ಟ್ರಾರ್ರ ರೂಬರೂ ಹಾಜರಾಗಿ ರೂಲ್ಸ್ ಮೇರಿಗೆ ಪಾವತೀ ಮಾಡಬೇಕಾಗಿರುವ ಭದ್ರ ಪಡಿಸಿದ ಫೀಜು ಪಾವತೀ ಮಾಡಿ ವಾಪಸ್ ಪಡೆಯ ಬಹುದು ತಪ್ಪಿದರೆ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವದು:—

ರೆಜಿಸ್ಟ್ರಾ ಇನಸಿ ನಂಬರ್.	ಕಕ್ಷಿಗಾರರ ಹೆಸರು.		ತಂಸೂಕಿನ ತಾರೀಖು.	ರೆಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ಸ್ವಭಾವ.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.				
1885—86ನೇ ಇಸವಿ 82ನೇ ನಂಬರು.	ಪೆರೇಸಂದ್ರದಲ್ಲಿ ಇರುವ ಜಂಗಮನಕೋಟಿ ಶಿಂಕಯ್ಯನ ಮಗ ಸುಬ್ಬರಾಜು.	ಪೆರೇಸಂದ್ರದಲ್ಲಿ ಇರುವ ಚಿಪ್ಪರಾಯಪ್ಪನ ಕೋಡಯ್ಯ ನಾಯಪ್ಪನ.	1885ನೇ ಇಸವಿ ಜೂನ್ ತಾರೀಖು 24.	1885ನೇ ಇಸವಿ ಜೂನ್ ತಾರೀಖು 26.	1885ನೇ ಇಸವಿ ಜೂನ್ ತಾರೀಖು 26.	ಪೆರೇಸಂದ್ರ ಗ್ರಾಮದ ಬಳಿ ಫಾರೆಸ್ಟ್ ಕಡೆ ಗೋವಿಂದಪ್ಪನ ತೋಪಿನ ಹತ್ತಿರ ಇರುವ ಬಿದುಕೊಟ್ಟವನ ಸ್ವಂತ ಕಬ್ಜಾದಲ್ಲಿರುವ ಸರ್ವೇ 73ನೇ ನಂಬರು ಅರೀ ಜಮೀನ್ ೧-೩೭ ಗುಂಟೆ ಜಮೀನನ್ನು 20 ರೂಪಾಯಿಗಳಿಗೆ ಕ್ರಯಕ್ಕೆ ಕೊಟ್ಟು ಇರುವದು.

ಸಿ. ಸುಬ್ಬರಾವ್,
ರಿಜಿಸ್ಟ್ರಾರ್.